

## ಕೋಲೆ ಬಸವ

‘ಬಾಗಿಲ ಬಳಿಗೆ ಬಂದಿದೆ ಬಸವ ಜುಂಜಪ್ಪನ ಮಠದ ಬಸವ’ ಎಂದು ಹಾಡುತ್ತಾ ಬಣ್ಣದರಿವೆಗಳ ಮೇಲು ಹೊದಿಕೆಯಿಂದ ಮುಚ್ಚಿ ‘ದೇವರು’, ‘ಸ್ವಾಮಿ’, ‘ಒಡೆಯ’ನೆಂದು ಹೊಗಳುತ್ತಾ ಜನರನ್ನು ಆಕರ್ಷಿಸಿ, ಭವಿಷ್ಯವನ್ನು ಹೇಳುವ ಬಸವನೆಂದು ಹೊಗಳಿ ಬೆಳಗಿನ ಹೊತ್ತಿನಲ್ಲಿ ಒಲಗ ನುಡಿಸುತ್ತಾ ಬರುವ ಜುಂಜಪ್ಪನ ನೋಡುವುದು ಅಪರೂಪ ಅಲ್ಲವಾ?

ಈಗಿನ ಮಕ್ಕಳಂತೂ ನೋಡೇ ಇರುವುದಿಲ್ಲ. ನೀವು ಈ ಚಿತ್ರದಲ್ಲಿ ನೋಡುತ್ತಿರುವ ಜುಂಜಪ್ಪ ಬಾಗಿಲಲ್ಲಿ ನಿಂತಿಲ್ಲ. ಇದನ್ನು ನೀವು ಮಕ್ಕಳಿಗೆ ತೋರಿಸಬೇಕೆಂದರೆ ಬೆಂಗಳೂರಿನ ಜಕ್ಕೂರಿನಲ್ಲಿರುವ ಮಾದರಿ ಪಾರಂಪರಿಕ ಗ್ರಾಮಕ್ಕೆ (ಮಾಡೆಲ್ ವಿಲೇಜ್) ಕರೆದೊಯ್ಯಬೇಕು. ಸಿಮೆಂಟ್ ಬೊಂಬೆ ತಯಾರಿಸಿ ಸುಂದರವಾದ ಹಳ್ಳಿ ಸೃಷ್ಟಿಸಿದ್ದಾರೆ.

—ಅನನ್ಯ ಮೋಹನ್, ಬೆಂಗಳೂರು

## ಹಂಪಿಯ ಮಣ್ಣಿನ ರಥ!



ಕರ್ನಾಟಕದ ಹಂಪಿಯಲ್ಲಿರುವ ಕಲ್ಲಿನ ರಥವು ಜಗದ್ವಿಖ್ಯಾತಿಯನ್ನು ಪಡೆದಿದೆ. 16ನೇ ಶತಮಾನದಲ್ಲಿ ವಿಜಯನಗರದ ಸಾಮ್ರಾಜ್ಯದ ಅರಸ ಶ್ರೀಕೃಷ್ಣದೇವರಾಯನ ಕೊಡುಗೆ ಈ ಕಲ್ಲಿನ ರಥ. ಧಾರವಾಡದ ವಿನಾಯಕ ಹಿರೇಮಠ ಎಂಬ ಯುವ ಕಲಾವಿದ ಹಂಪಿಯ ಕಲ್ಲಿನ ರಥದ ನಮೂನೆಯನ್ನು ಪುಟ್ಟದಾಗಿ ಮಣ್ಣಿನಲ್ಲಿ ಮಾಡಿದ್ದಾನೆ. ಇಲ್ಲಿನ ಕೆತ್ತನೆಗಳನ್ನು, ರಥದ ವಿವಿಧ ಆಯಾಮಗಳನ್ನು ಸೂಕ್ಷ್ಮವಾಗಿ ಗಮನಿಸಿ, ತನ್ನ ಕಲಾ ನಿಪುಣತೆಯನ್ನು ತೋರಿಸಿದ್ದಾನೆ. ನೋಡಲು ಹಂಪಿಯ ಕಲ್ಲಿನ ರಥವನ್ನೇ ಹೋಲುವ ಇದನ್ನು ರಚಿಸಲು ತೆಗೆದುಕೊಂಡಿದ್ದು ಹತ್ತು ದಿನಗಳು. ಈ ಯುವ ಕಲಾವಿದನ ಕೈಯಲ್ಲಿ ಇಂತಹ ಸಾಕಷ್ಟು ಕಲಾಕೃತಿಗಳು ಅರಳಿವೆ.

—ಈರಣ್ಣ ಬೆಂಗಾಲಿ, ರಾಯಚೂರು

## ಹಸಿರು ಕಳ್ಳಿಪೀರ ಪಕ್ಷಿ

ಬಯಲು ಸೀಮೆಯಲ್ಲಿ ಸಾಮಾನ್ಯವಾಗಿ ಕಂಡುಬರುವ ಹಸಿರು ಕಳ್ಳಿ ಪೀರ (Green bee eater) ಪಕ್ಷಿಯನ್ನು ಸಂಸ್ಕೃತದಲ್ಲಿ ‘ಸಾರಂಗ’, ತುಳು ಭಾಷೆಯಲ್ಲಿ ‘ತುಂಟೆ ಪಕ್ಷಿ’ ಎಂದು ಕರೆಯುತ್ತಾರೆ. ಈ ಪಕ್ಷಿಗಳು ಹುಳ ಹುಪ್ಪಟೆಗಳನ್ನು ತಿಂದು ಬದುಕುತ್ತವೆ. ಆಕಾರದಲ್ಲಿ ಗುಬ್ಬಿಗಿಂತ ಸ್ವಲ್ಪ ಉದ್ದವಿದ್ದು ಬಾಲವು ಕಡ್ಡಿಯಾಕಾರದಲ್ಲಿ ಹಿಂದ ಇರುತ್ತದೆ. ದೇಹದ ತುಂಬೆಲ್ಲ ಹಸಿರು ಗರಿಗಳಿದ್ದು ಅದರ ಕೊಕ್ಕು ಹಾರಾಡುವ ಜೇನು ಹುಳಗಳನ್ನು ಹಿಡಿಯಲು ಸ್ವಲ್ಪ ಉದ್ದವಿರುತ್ತದೆ. ಕಣ್ಣಿನ ಕೆಳಗೆ ಕಪ್ಪನೆಯ ಪಟ್ಟಿ ಇರುತ್ತದೆ.

ಮಾರ್ಚ್‌ನಿಂದ ಜೂನ್‌ವರೆಗೆ ಈ ಪಕ್ಷಿಯ ಸಂತಾನೋತ್ಪತ್ತಿ ಕಾಲ. ಅವುಗಳು ಮಣ್ಣಿನ ದಂಡೆಗಳಲ್ಲಿ ಟೊಳ್ಳುಗಳಲ್ಲಿ ಗೂಡು ಕಟ್ಟುತ್ತವೆ. ಸುರಂಗಾಕಾರದ ಗೂಡಿನ ಕೊನೆಯಲ್ಲಿ ಸುಮಾರು 3–5 ಮೊಟ್ಟೆಗಳನ್ನು ಇಡುತ್ತವೆ. ಇವುಗಳೂ ಮಾನವ ವೀಕ್ಷಕರ ನಡುವಳಿಕೆಯನ್ನು ಅರ್ಥೈಸುವ ಸಾಮರ್ಥ್ಯವನ್ನು ಹೊಂದಿರಬಹುದು ಎಂದು ಅಧ್ಯಯನವು ಸೂಚಿಸಿದೆ.

—ಶಿವುಕುಮಾರ ಎಂ. ಸಿನ್ನಾರ್, ವಿಜಯಪುರ



## ತ್ರಿಶಂಕು ಸ್ವರ್ಗ...!



ನಮ್ಮ ಹೂದೋಟದಲ್ಲಿ ಎರಡು ಆಕರ್ಷಕ ಬಣ್ಣದ ಚಿಟ್ಟೆಗಳು ಒಂದಕ್ಕೊಂದು ತಳುಕು ಹಾಕಿಕೊಂಡಿದ್ದವು. ಒಂದು ಎಲೆಯ ತಳಭಾಗಕ್ಕೆ ಅಂಟಿಕೊಂಡಿದ್ದ ಅವುಗಳನ್ನು ಕಂಡು ಆ ದೃಶ್ಯವನ್ನು ಸೆರೆಹಿಡಿಯಲು ಸದ್ದಿಲ್ಲದಂತೆ ಅವುಗಳ ಬಳಿಗೆ ಹೋದೆ. ಇನ್ನೇನು ಫೋಟೊ ತೆಗೆಯಬೇಕು ಎನ್ನುವಷ್ಟರಲ್ಲಿ, ಅವು ಅಲ್ಲಿಂದ ಹಾರಿ ಇನ್ನೊಂದು ಗಿಡದ ಮೇಲೆ ಕೂತವು. ಇದೇ ರೀತಿ ಹಲವು ಬಾರಿ ಕಣ್ಣಾಮುಚ್ಚಾಲೆ ಆಟ ಆಡಿ ಸುಸ್ತಾಗಿ ಕೊನೆಗೆ ಎಲೆಗಳೇ ಇಲ್ಲದ ಒಂದು ಒಣ ರೆಂಬೆಗೆ ಜೋತು ಬಿದ್ದವು. ಒಣ ರೆಂಬೆಯನ್ನು ಒಂದು ಚಿಟ್ಟೆ ತನ್ನ ಅಂಗಾಂಗಗಳಿಂದ ಹಿಡಿದುಕೊಂಡಿದ್ದರೆ ಮತ್ತೊಂದು ತನ್ನ ಸಹವರ್ತಿ ಚಿಟ್ಟೆಗೆ ತಳುಕು ಹಾಕಿ ಸರಸವಾಡುತ್ತಿದ್ದವು. ಫೋಟೊ ತೆಗೆಯಲು ಇದಕ್ಕಿಂತ ಸೂಕ್ತವಾದ ಅವಕಾಶ ಬೇರೆ ಬೇಕೇ ಎಂದು ಸಂಭ್ರಮದಿಂದ ಕ್ಲಿಕ್ಕಿಸತೊಡಗಿದೆ. ‘ಮಧುಚಂದ್ರಕ್ಕೆ ಹೋದರೂ ಈ ಫೋಟೊಗ್ರಾಫರ್‌ಗಳ ಕಾಟ ತಪ್ಪಿದ್ದಲ್ಲ’ ಎಂದು ಶಪಿಸುವಂತೆ ಆ ಜೋಡು ಚಿಟ್ಟೆಗಳು ಅಲ್ಲಿಂದ ಹಾರಿ ಹೋದವು.

—ಡಾ. ವೇಣುಗೋಪಾಲ ಶರ್ಮಾ, ಗುರುವಾಯನಕೆರೆ